ಗಾಂಧಿಗೆ ಎದುರಾಗದಿದ್ದ ತಳಮಳವೊಂದು ಎದುರಾಯಿತು. ಗೆಳೆಯನೊಬ್ಬನಿಗೆ ಬರೆದ ಪತ್ರದಲ್ಲಿ 'ಈ ದೇಶದಲ್ಲಿ ನಾನು ಒಂದು ದಿನವೂ ಇರಲಾರೆ; ಇಲ್ಲಿ ಭಾರತೀಯರನ್ನು ನಾಯಿಗಳಂತೆ ಕಾಣುತ್ತಾರೆ' ಎಂದು ಲೋಹಿಯಾ ಬರೆದರು. ಭಾರತೀಯರನ್ನು ಗುಲಾಮರನ್ನಾಗಿಸಿಕೊಂಡು ಆಳುತ್ತಿರುವ ಇಂಗ್ಲೆಂಡಿನಲ್ಲಿ ಓದು ಮುಂದುವರಿಸಲು ಲೋಹಿಯಾ ಮನಸ್ಸು ಮುಷ್ಕರ ಹೂಡತೊಡಗಿತು!

ಇಂಥ ಸಂದಿಗ್ಧದಲ್ಲಿದ್ದ ಲೋಹಿಯಾಗೆ ಇಂಗ್ಲೆಂಡಿನ ಪ್ರೀತಿಯ ಮುಖವೂ ದಕ್ಕಿತು. ಬಡಕುಟುಂಬವೊಂದರ ತರುಣ ಜೆರಾರ್ಡ್, ಅವನ ತಂದೆ, ತಾಯಿ ಮೂವರಿಗೂ ಲೋಹಿಯಾ ಕಂಡರೆ ಅಕ್ಕರೆ. ಇನ್ನೂ ಕೆಲವು ಒಳ್ಳೆಯ ಇಂಗ್ಲಿಷ್ ಗೆಳೆಯರೂ ಲೋಹಿಯಾಗೆ ಸಿಕ್ಕರು. ಆದರೆ ಇಂಗ್ಲೆಂಡಿನಲ್ಲಿ ಓದುವುದೋ, ಬೇಡವೋ ಎಂಬ ಗೊಂದಲ ಮಾತ್ರ ಮುಂದುವರಿಯಿತು. ಕೊನೆಗೆ ಈ ಗೊಂದಲಕ್ಕೆ ಒಬ್ಬ ಇಂಗ್ಲಿಷ್ ವ್ಯಕ್ತಿಯಿಂದಲೇ ಪರಿಹಾರ ಸಿಕ್ಕಿತು.

ಲೋಹಿಯಾ ಲೈಬ್ರರಿಯೊಂದರ ಅಲ್ಮೆರಾಗಳಲ್ಲಿ ಯಾವುದೋ ಪುಸ್ತಕ ಹುಡುಕುತ್ತಿದ್ದರು. 'ಮೇ ಐ ಹೆಲ್ಪ್ ಯು?' ಎಂದು ಒಬ್ಬ ಇಂಗ್ಲಿಷ್‌ಮನ್ ಅವರನ್ನು ಕೇಳಿದ. ಆ ಇಂಗ್ಲಿಷ್‌ಮನ್ ಜೊತೆ ಮಾತಾಡುತ್ತಾ ಲೋಹಿಯಾ ತಮ್ಮ ಕಷ್ಟ ಹೇಳಿಕೊಂಡರು: 'ನಾನು ನಿಜಕ್ಕೂ ಓದಲು ಬಯಸಿದ್ದು ಯುರೋಪಿನಲ್ಲಿ; ಇಂಗ್ಲೆಂಡಿನಲ್ಲಲ್ಲ.' ಲೋಹಿಯಾರ ತಳಮಳ ಅರ್ಥ ಮಾಡಿಕೊಂಡ ಇಂಗ್ಲಿಷ್‌ಮನ್ ಹೇಳಿದ: 'ನೀನು ನಿನ್ನ ದೇಶ ಬಿಟ್ಟು ಹೊಸದೇನನ್ನಾದರೂ ಕಲಿಯಲು ಬಂದಿದ್ದರೆ, ನೇರವಾಗಿ ಜರ್ಮನಿಯ ಬರ್ಲಿನ್‌ಗೆ ಹೋಗು. ಅಲ್ಲಿ ನಿನಗೆ ಹೊಸ ಹೊಸ ವಿಚಾರಗಳು ಸಿಗುತ್ತವೆ. ಲಂಡನ್ನಿನಲ್ಲಿ ನಿನಗೆ ಏನೂ ಸಿಗುವುದಿಲ್ಲ. ಜರ್ಮನಿಯಲ್ಲಿ ನೀನು ಅರಸಿ ಬಂದಿರುವುದೆಲ್ಲ ಸಿಗುತ್ತದೆ– ಹೊಚ್ಚ ಹೊಸ ಚಿಂತನೆ, ಚಿಂತನೆಗೆ ಹಚ್ಚುವ ಪರಿಸರ.'

ಆ ಕಾಲದಲ್ಲಿ ಜರ್ಮನಿ 'ಯುರೋಪಿನ ಫಿಲಾಸಫರ್' ಎಂದು ಹೆಸರಾಗಿತ್ತು. ಜಗತ್ತಿನ ಚಿಂತನೆ, ಶ್ರಮಿಕರ ಬದುಕು, ರಾಜಕಾರಣ, ಪ್ರಭುತ್ವಗಳ ದಿಕ್ಕನ್ನೇ ಬದಲಾಯಿಸಿದ ಕಾರ್ಲ್ ಮಾರ್ಕ್ಸ್, ತತ್ವಜ್ಞಾನಿ ನೀಷೆ, ಭೌತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಜರ್ಮನ್ನರು. ಆಸ್ಟ್ರಿಯಾದ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಜರ್ಮನ್ ಭಾಷೆಯಲ್ಲೇ ಬರೆದವನು. ಈ ನಾಲ್ವರು ಧೀಮಂತರೂ ಜಗತ್ತಿನ ಜನರ ದೃಷ್ಟಿಕೋನಗಳನ್ನು ನಿರ್ಣಾಯಕವಾಗಿ ಬದಲಿಸಿದವರು.

ಫಿಲಾಸಫಿ, ರಾಜಕೀಯ, ಅರ್ಥಶಾಸ್ತ್ರ, ಚರಿತ್ರೆಯ ಬಗ್ಗೆ ಒಲವಿದ್ದ ಲೋಹಿಯಾ ಈ ವಿಷಯಗಳನ್ನು ಅಧ್ಯಯನ ಮಾಡಲು ಜರ್ಮನಿಯ ರಾಜಧಾನಿ ಬರ್ಲಿನ್‌ಗೆ ಹೊರಟರು. ಜರ್ಮನ್ ಭಾಷೆಯ 'ಅ ಆ ಇ ಈ' ಕೂಡ ಬರದ ಲೋಹಿಯಾ ಬರ್ಲಿನ್‌ವರೆಗಿನ ರೈಲು ಪಯಣದ ಹಾದಿಯಲ್ಲೇ ನಿತ್ಯದ ಬಳಕೆಗೆ ಬೇಕಾಗುವಷ್ಟು ಸಣ್ಣಪುಟ್ಟ ಜರ್ಮನ್ ಪದಗಳನ್ನು, ವಾಕ್ಯಗಳನ್ನು ಕಲಿತುಕೊಂಡರು.

ಲೋಹಿಯಾ ಪ್ರಖ್ಯಾತ ಬರ್ಲಿನ್ ವಿಶ್ವವಿದ್ಯಾಲಯಕ್ಕೆ– ಈಗಿನ ಹಂಬೋಲ್ಟ್ ವಿಶ್ವವಿದ್ಯಾಲಯ– ಭೇಟಿ ಕೊಟ್ಟರು. ಆಲ್ಬರ್ಟ್ ಐನ್‌ಸ್ಟೈನ್ ಅಲ್ಲಿ ಪ್ರಾಧ್ಯಾಪಕರಾಗಿದ್ದರು. ಸಮಾಜವಾದಿ ಚಿಂತಕ ಇ.ಎಫ್. ಶೂಮಾಕರ್ ಅಲ್ಲಿ ಓದಿದ್ದರು. ಶೂಮಾಕರ್ ಮುಂದೆ ಗಾಂಧೀ ಚಿಂತನೆಯನ್ನು ಮರುವ್ಯಾಖ್ಯಾನ ಮಾಡಿದವರು; ಜಗತ್ತಿನ ಅತ್ಯಂತ ಪ್ರಭಾವಶಾಲಿ ಪುಸ್ತಕಗಳಲ್ಲೊಂದಾದ 'ಸ್ಮಾಲ್ ಈಸ್ ಬ್ಯೂಟಿಫುಲ್' ಕೃತಿ ಬರೆದವರು.

ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯ ಮಾರ್ಗದರ್ಶಕರು, ಪರೀಕ್ಷಕರನ್ನು ಸಂಶೋಧನಾ ವಿದ್ಯಾರ್ಥಿಗಳೇ ಆರಿಸಿಕೊಳ್ಳಲು ಅವಕಾಶವಿತ್ತು. ಲೋಹಿಯಾ ಆ ಕಾಲದ ಮುಖ್ಯ ಅರ್ಥಶಾಸ್ತ್ರಜ್ಞರಾಗಿದ್ದ ಪ್ರೊಫೆಸರ್ ವೆರ್ನರ್ ಸೊಂಬಾರ್ಟ್ ಅವರನ್ನು ಕಂಡು ತಮ್ಮ ಅಧ್ಯಯನದ ವಸ್ತು, ಉದ್ದೇಶಗಳ ಬಗ್ಗೆ ಹೇಳಿ, ಪಿಎಚ್.ಡಿ. ಅಧ್ಯಯನಕ್ಕೆ ಮಾರ್ಗದರ್ಶನ ಮಾಡಲು ಕೋರಿದರು. ಲೋಹಿಯಾ ಇಂಗ್ಲಿಷಿನಲ್ಲಿ ಮಾತಾಡುತ್ತಿದ್ದರು; ಜರ್ಮನಿಯಲ್ಲಿ ಉತ್ತರಿಸುತ್ತಿದ್ದ ಸೊಂಬಾರ್ಟ್ ಹೇಳಿದರು: 'ನನಗೆ ಇಂಗ್ಲಿಷ್ ಬರಲ್ಲ.' ಮಾತುಕತೆಯ ಕೊನೆಗೆ ಲೋಹಿಯಾ ಹೇಳಿದರು: 'ನಾನು ಸದ್ಯಕ್ಕೆ ಜರ್ಮನ್ ಭಾಷೆಯಲ್ಲಿ ಮಾತಾಡಲು ಆಗುತ್ತಿಲ್ಲ, ಕ್ಷಮಿಸಿ. ಮೂರು ತಿಂಗಳ ನಂತರ ಬಂದು ನಿಮ್ಮನ್ನು ಭೇಟಿಯಾಗುವೆ.'

ಅದು ಆರ್ಥಿಕ ಕುಸಿತದಿಂದ ಜರ್ಮನಿ ಪ್ರಕ್ಷುಬ್ಧವಾಗಿದ್ದ ಕಾಲ. ನಿರುದ್ಯೋಗ, ಬಡತನಗಳು ಹೆಚ್ಚತೊಡಗಿದ್ದವು. ಬರ್ಲಿನ್ ನಗರದ ಹಾದಿ ಬೀದಿಗಳಲ್ಲಿ ಬಿಸಿ ಬಿಸಿ ರಾಜಕೀಯ ಚರ್ಚೆಗಳು, ರಾಜಕೀಯ ಜಗಳಗಳು ನಡೆಯುತ್ತಿದ್ದವು. ಈ ಗೊಂದಲದ ಸ್ಥಿತಿ ಬಳಸಿಕೊಂಡು ಹಿಟ್ಲರ್ ಅಧಿಕಾರ ಹಿಡಿಯಲು ಹವಣಿಸುತ್ತಿದ್ದ ಕಾಲ ಅದು.

ಅತ್ತ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ತೀವ್ರವಾಗತೊಡಗಿತ್ತು. ಆ ಘಟ್ಟದ ಭಾರತದ ರಾಜಕೀಯ ಸಂದರ್ಭ ಹಾಗೂ ಬ್ರಿಟಿಷ್ ಆರ್ಥಿಕ ನೀತಿಗಳ ಹಿನ್ನೆಲೆಯಲ್ಲಿ ಭಾರತದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಸಂಶೋಧನೆ ಮಾಡಬೇಕೆಂಬ ತುಡಿತ ಲೋಹಿಯಾರಲ್ಲಿ ಹುಟ್ಟಿದಂತಿದೆ. ನಾವು ಜೀವಿಸುತ್ತಿರುವ ಕಾಲಕ್ಕೂ ನಮ್ಮ ಅಕಡೆಮಿಕ್ ಸಂಶೋಧನೆಗೂ ಎಂಥ ಸಂಬಂಧ ಇರಬೇಕು ಎಂಬುದನ್ನು 'ಉಪ್ಪಿನ ಕಾನೂನುಗಳು ಮತ್ತು ಸತ್ಯಾಗ್ರಹ' ಎಂಬ ಅವರ ಸಂಶೋಧನಾ ವಸ್ತು ಸೂಚಿಸುತ್ತದೆ.

ಲೋಹಿಯಾ ಸಂಶೋಧನೆಯ ವಸ್ತುವನ್ನು ಭಾರತದ ಆ ಕಾಲಘಟ್ಟವೇ ನಿರ್ಧರಿಸಿದಂತಿದೆ! ಇಸವಿ 1930. ಕಾಂಗ್ರೆಸ್ ಗಾಂಧೀಜಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯ ಮುಂದಿನ ಹೋರಾಟವನ್ನು ರೂಪಿಸತೊಡಗಿತ್ತು. ಇಡೀ ದೇಶದ ಜನರಿಗೆ ಮುಖ್ಯ ಎನ್ನಿಸಬಲ್ಲ ಪ್ರಶ್ನೆಯೊಂದರ ಸುತ್ತ ಅಹಿಂಸಾತ್ಮಕ ಸತ್ಯಾಗ್ರಹವನ್ನು ಕಟ್ಟಲು ಗಾಂಧೀಜಿ ಯೋಚಿಸುತ್ತಿದ್ದಾಗ, ಒಂದು ದಿನ ಮಿಂಚಿನಂತೆ ಉಪ್ಪಿನ ಸತ್ಯಾಗ್ರಹದ ಕಲ್ಪನೆ ಅವರಿಗೆ ಹೊಳೆಯಿತು.

ಸಾವಿರಾರು ವರ್ಷಗಳಿಂದ ಕಡಲಿನಿಂದ ಉಪ್ಪು ತಯಾರಿಸುವ, ಬಳಸುವ ಸಹಜ ಸ್ವಾತಂತ್ರ್ಯ ಭಾರತೀಯರಿಗಿತ್ತು. ಆದರೆ ಪ್ರಕೃತಿ ಕೊಟ್ಟ ಉಪ್ಪನ್ನು ಸರ್ಕಾರಕ್ಕೆ ತೆರಿಗೆ ಕೊಡದೆ ಬಳಸುವಂತಿಲ್ಲ ಎಂಬ ಕಾಯ್ದೆಯನ್ನು ಬ್ರಿಟಿಷ್ ಸರ್ಕಾರ ಇದ್ದಕ್ಕಿದ್ದಂತೆ ಹೇರಿತು. ಜನರು ಕಡಲ ತಡಿಯಲ್ಲಿ ಉಪ್ಪನ್ನು ಸಂಗ್ರಹಿಸಲು ಆಗುವ ವೆಚ್ಚಕ್ಕಿಂತ ತೆರಿಗೆಯ ಭಾರ ಹೆಚ್ಚಾಯಿತು. ಈ ಅನ್ಯಾಯದ ಕಾಯ್ದೆಯನ್ನು ಪ್ರತಿಭಟಿಸುವ ಚಳುವಳಿ ಇಡೀ ಭಾರತದ ಜನರನ್ನು ಒಳಗೊಳ್ಳಬಲ್ಲದು ಎಂದು ಗಾಂಧೀಜಿಗೆ ಅನ್ನಿಸಿದಾಗ, ಈ ಸತ್ಯಾಗ್ರಹದ ಚೌಕಟ್ಟನ್ನು ಸಬರಮತಿ ಆಶ್ರಮದ ಸತ್ಯಾಗ್ರಹಿಗಳ ಜೊತೆ ಚರ್ಚಿಸಿದರು:

ಉಪ್ಪಿನ ಕಾಯ್ದೆಯನ್ನು ಧಿಕ್ಕರಿಸಿ ಸತ್ಯಾಗ್ರಹಿಗಳು ನೇರವಾಗಿ ಸಮುದ್ರದ ದಂಡೆಗೆ ಹೋಗುವರು; ಸತ್ಯಾಗ್ರಹಿಗಳು ಕಾನೂನನ್ನು ಉಲ್ಲಂಘಿಸಿ ತಯಾರಿಸಿದ ಉಪ್ಪನ್ನು ಸುತ್ತಮುತ್ತಲ ಜನರು ಸಮುದ್ರದಿಂದ ದೂರ ವಾಸಿಸುತ್ತಿರುವವರಿಗೆ ಮಾರುವರು; ಜನರು ಆ ಉಪ್ಪನ್ನು ಕೊಳ್ಳುವರು. ಹೀಗೆ ಈ ಚಳುವಳಿಯಲ್ಲಿ ಭಾಗಿಯಾಗುವ ಎಲ್ಲರೂ ಉಪ್ಪಿನ ತೆರಿಗೆಯ ಕಾಯ್ದೆಯನ್ನು ಉಲ್ಲಂಘಿಸುವರು. ಎಲ್ಲ ಜಾತಿ, ಧರ್ಮದವರು, ಜನಸಾಮಾನ್ಯರು, ರೈತರು, ಭೂಹೀನರು... ಎಲ್ಲರಿಗೂ ಬೇಕಾದ ಉಪ್ಪನ್ನು ಕೇಂದ್ರವಾಗಿಟ್ಟುಕೊಂಡ ಈ ಸತ್ಯಾಗ್ರಹ ಇಡೀ ದೇಶವನ್ನೇ ಒಳಗೊಳ್ಳಬಲ್ಲದೆಂಬ ಬಗ್ಗೆ ಗಾಂಧೀಜಿಗೆ ವಿಶ್ವಾಸವಿತ್ತು. ಆಶ್ರಮವಾಸಿಗಳು ಈ ಸತ್ಯಾಗ್ರಹಕ್ಕೆ ಸಿದ್ಧರಾದರು.

ಆಶ್ರಮವಾಸಿಗಳ ಜೊತೆಗಿನ ಮೊದಲ ಸುತ್ತಿನ ಚರ್ಚೆಯ ನಂತರ, 1930ರ ಮಾರ್ಚ್ 5ರಂದು ಉಪ್ಪಿನ ಸತ್ಯಾಗ್ರಹ ಶುರು ಮಾಡಬೇಕೆಂದು ಗಾಂಧೀಜಿ ಹೇಳಿದಾಗ ನೆಹರು, ವಲ್ಲಭಬಾಯಿ ಪಟೇಲ್ ಥರದ ನಾಯಕರಿಗೂ ಉತ್ಸಾಹ ಹುಟ್ಟಲಿಲ್ಲ. ಬ್ರಿಟಿಷ್ ಸರ್ಕಾರ ಕೂಡ ಉಪ್ಪಿನ ಚಳುವಳಿಯಿಂದ ಏನು ಮಹಾ ಆದೀತು ಎಂಬ ಉದಾಸೀನದಲ್ಲಿತ್ತು. ಚಳುವಳಿ ಶುರುವಾಗುವ ಮೊದಲೇ ಗಾಂಧೀಜಿಯವರನ್ನು ಬಂಧಿಸಿದರೆ ಅವರ ಶಕ್ತಿ ಇನ್ನಷ್ಟು ಹೆಚ್ಚುತ್ತದೆ ಎಂದು ತೀರ್ಮಾನಿಸಿದ ಬ್ರಿಟಿಷ್ ಸರ್ಕಾರ, ಚಳುವಳಿ ಹೇಗೆ ನಡೆಯುತ್ತದೆಂದು ಕಾದು ನೋಡಲು ನಿರ್ಧರಿಸಿತು.

ಗಾಂಧೀಜಿಯ ನಿರ್ಧಾರ ಗಟ್ಟಿಯಾಗಿತ್ತು. 'ಬ್ರಿಟಿಷ್ ಸರ್ಕಾರಕ್ಕೆ ಈ ದೇಶದ ಎಲ್ಲ ಕಡಲ ತೀರಗಳನ್ನು ಕಾಯುವ ಶಕ್ತಿಯಿದೆಯೆ?' ಎಂದು ಸತ್ಯಾಗ್ರಹಿಗಳ ಸಭೆಯಲ್ಲಿ ಗಾಂಧೀಜಿ ಸವಾಲೆಸೆದರು! 'ಭಾರತದ ಏಳು ಲಕ್ಷ ಹಳ್ಳಿಗಳಿಂದ ತಲಾ ಹತ್ತು ಜನ ಮುಂದೆ ಬಂದು ಉಪ್ಪು ತಯಾರಿಸಿ ಉಪ್ಪಿನ ಕಾಯ್ದೆಯನ್ನು ಧಿಕ್ಕರಿಸಿದರೆ ಈ ಸರ್ಕಾರ ಏನು ಮಾಡೀತು?' ಎಂದ ಗಾಂಧೀಜಿ, 'ನಾವು ಕೆಲವೇ ದಿನಗಳಲ್ಲಿ ಈ ಸರ್ಕಾರವನ್ನು ಸುಸ್ತಾಗಿಸಬಲ್ಲೆವು ಎಂದು ಗ್ಯಾರಂಟಿ ಕೊಡುವೆ' ಎಂದು ಹೇಳಿದರು.

12 ಮಾರ್ಚ್ 1930. ಬೆಳಗಿನ ಜಾವ ಗಾಂಧೀಜಿಯವರ ಮುಂದಾಳತ್ವದಲ್ಲಿ ಸತ್ಯಾಗ್ರಹಿಗಳ ತಂಡ ಸಬರಮತಿ ಆಶ್ರಮ ಬಿಟ್ಟು ಹೊರಟಿತು. ಈ ನಡಿಗೆ ಕೇವಲ ಹಾದಿ ಸವೆಸುವ ಕಾಲ್ನಡಿಗೆಯಾಗಿರಲಿಲ್ಲ; ಸತ್ಯಾಗ್ರಹಿಗಳ ತಂಡ